# ಆಹಾ ಸುದ್ದಿ!

★ ಸಸಿತೋಟ



ಚೀನಾದ ಗುವಾಂಗ್‌ಡಾಂಗ್ ಪ್ರಾಂತ್ಯದ ವಾಟರ್ ಪಾರ್ಕ್‌ನಲ್ಲಿ ನಡೆದ ನೀರಿನೊಳಗಣ ಚುಂಬನ ಸ್ಪರ್ಧೆಯಲ್ಲಿ ಕಾರು ಮೆಕ್ಯಾನಿಕ್ ಯಾನ್ ಹಾಗೂ ಆತನ ಗೆಳತಿ 40 ಸೆಕೆಂಡ್ ಕಾಲ ಚುಂಬಿಸಿ ವಿಜೇತರಾದರಂತೆ. ಬಹುಮಾನವಾಗಿ ಯಾನ್‌ಗೆ ಒಂದು ವರ್ಷ ಕಾಲ ಈ ವಾಟರ್ ಪಾರ್ಕ್‌ಗೆ ಉಚಿತವಾಗಿ ಪ್ರವೇಶ ನೀಡಲಾಗಿದೆಯಂತೆ. ಮುಂದಿನ ಸ್ಪರ್ಧೆಗೆ ಅಭ್ಯಾಸ ಮಾಡಲು ಹಲವು ಗೆಳತಿಯರು ಈ ಪಾರ್ಕ್‌ನಲ್ಲಿ ಸಿಗಬಹುದು.

ಅಮೆರಿಕಾದ ಸೈನಿಕ ನೇಮಕಾತಿ ಆಯೋಗ ಪೆನ್ಸಿಲ್ವೇನಿಯಾದ 14,000 ಮಂದಿಗೆ ತಕ್ಷಣ ಮಿಲಿಟರಿಗೆ ನೋಂದಣಿ ಮಾಡಿಕೊಳ್ಳಬೇಕು, ತಪ್ಪಿದರೆ ದಂಡ ಮತ್ತು ಸೆರೆವಾಸ ಎಂದು ನೋಟಿಸ್ ಕಳಿಸಿತು. ಕಂಗಾಲಾಗಿ ಆಯೋಗಕ್ಕೆ ಫೋನ್ ಮಾಡಿದವರು ಈ 14,000 ಮಂದಿಯಲ್ಲ, ಅವರ ಮೊಮ್ಮಕ್ಕಳು, ಮರಿ ಮಕ್ಕಳು. ಆಯೋಗದ ಕ್ಲರ್ಕ್ 1993 ಮತ್ತು 97ರ ಮಧ್ಯೆ ಹುಟ್ಟಿದವರ ಪಟ್ಟಿಯ ಬದಲಾಗಿ ಒಂದು ಶತಮಾನದ ಹಿಂದಕ್ಕೆ ಹೋಗಿ 1893- 97ರ ಮಧ್ಯೆ ಹುಟ್ಟಿದವರ ಹೆಸರಿಗೆ, ಅಂದರೆ ಮೊದಲ ಜಾಗತಿಕ ಯುದ್ಧದಲ್ಲಿ ಭಾಗವಹಿಸಿದ್ದವರ ವಿಳಾಸಕ್ಕೆ ನೋಟಿಸ್ ಕಳಿಸಿದ್ದ. ಭಾರತದಲ್ಲಿದ್ದರೇನು, ಅಮೆರಿಕಾದಲ್ಲಿದ್ದರೇನು ಮನುಷ್ಯ ಎಂದ ಮೇಲೆ ತಪ್ಪು ಮಾಡದಿರುತ್ತಾನೆಯೇ!



ಇದು ನ್ಯೂಯಾರ್ಕ್‌ನಲ್ಲಿ ಸಿರಿವಂತರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶದಲ್ಲಿರುವ ಅಪಾರ್ಟ್‌ಮೆಂಟ್. ಗ್ರೆಗರಿ ಸ್ಟೆಕ್ ಎಂಬಾತನಿಗೆ ಸೇರಿರುವ ಇದರಲ್ಲಿ ಪ್ರಾಣಿಗಳ ಚರ್ಮದಲ್ಲಿ ಹುಲ್ಲು ತುಂಬಿಸಿರುವ ಕಲಾಕೃತಿಗಳೇ ತುಂಬಿ ಹೋಗಿವೆ. ಮನುಷ್ಯ ಕಾಡಿಗೆ ನುಗ್ಗಿ, ಪ್ರಾಣಿಗಳೆಲ್ಲ ಪುರ ಪ್ರವೇಶಿಸಿ ಎಷ್ಟೋ ವರ್ಷಗಳಾದವು. ಪ್ರಾಣಿಗಳ ಜೊತೆ ಸಹಬಾಳ್ವೆ ಮಾಡಿದಂತೆ ಎಂದು ಸ್ಟೆಕ್ ಹೇಳಿಕೊಂಡಿದ್ದಾನಂತೆ. ಆದರೆ ಬಾಳ್ವೆ ಮಾಡುವುದು ಹೋಗಲಿ, ಕೂರುವುದಕ್ಕಾದರೂ ಜಾಗ ಎಲ್ಲಿದೆ ಇಲ್ಲಿ?



ಭೂತದಂತೆ ಉಡುಪು ಧರಿಸಿರುವ ಈ ವ್ಯಕ್ತಿ ಶಾಂಪೂ ಹಾಗೂ ಇತರ ಕೇಶವರ್ಧಕ ಉತ್ಪನ್ನಗಳ ಜಾಹೀರಾತಿನಲ್ಲಿ ರೂಪದರ್ಶಿಯ ಕೂದಲು ಹಾರಾಡುವಂತೆ ಗಾಳಿಯನ್ನು ಊದುವುದರಲ್ಲಿ ನಿಷ್ಣಾತನಂತೆ. ಅಮೆರಿಕಾದಲ್ಲಿ ಸಂಸ್ಥೆಯೊಂದು ಪಟ್ಟಿ ಮಾಡಿದ ವಿಚಿತ್ರವಾದ ಉದ್ಯೋಗಗಳಲ್ಲಿ ಈತನೂ ಸ್ಥಾನ ಪಡೆದಿದ್ದಾನೆ. ತಂತ್ರಜ್ಞಾನ ಎಷ್ಟೇ ಮುಂದುವರಿದರೂ ನಿರುದ್ಯೋಗ ಕಾಡುವುದಿಲ್ಲ ಬಿಡಿ..



ಬ್ರಿಟನ್ನಿನಲ್ಲಿ ಹೆಚ್ಚು ತುಂಟ ಸಾಕು ಪ್ರಾಣಿ ಸ್ಪರ್ಧೆ ನಡೆಯಿತು. ಜರ್ಮನ್ ಷೆಫರ್ಡ್‌ಗೆ ಕ್ರಾಸ್ ಮಾಡಿದ ಈ ಯೋಡಿ ಎಂಬ ನಾಯಿ ನಂಬರ್ ಒನ್ ತುಂಟ ಪ್ರಶಸ್ತಿ ಗಳಿಸಿತು. ಒಡತಿಗೆ ನೂರಾರು ಪೌಂಡ್‌ಗಳಷ್ಟು ನಷ್ಟ ಮಾಡಿದ ಯೋಡಿ ಈಗ 500 ಪೌಂಡ್ ಪ್ರಶಸ್ತಿ ಹಣ ಪಡೆದು ನಷ್ಟ ಸರಿದೂಗಿಸಿದೆ.

ಜಪಾನಿನ ಅಸೆಂಬ್ಲಿ ಸದಸ್ಯ ನೋನೊಮುರಾ ಟಿ.ವಿ. ಸಂದರ್ಶನವೊಂದರಲ್ಲಿ ಬಿಕ್ಕಿ ಬಿಕ್ಕಿ ಅತ್ತ. ಮರುಕ್ಷಣವೇ ಸರ್ಕಾರ ಆತನ ರಾಜೀನಾಮೆ ಪಡೆಯಿತು. ರಾಜೀನಾಮೆ ಕೇಳಿದ್ದು ಅತ್ತಿದ್ದಕ್ಕಲ್ಲ, ಆತ ಸರ್ಕಾರದ ಹಣ ಬಳಸಿಕೊಂಡು ಬಿಸಿ ಬುಗ್ಗೆಗಳಿಗೆ 106 ಬಾರಿ ಭೇಟಿ ನೀಡಿದ್ದನಂತೆ. ಅವೆಲ್ಲ ಸರ್ಕಾರಿ ಕಾರ್ಯದ ಸಂಬಂಧದ ಪ್ರವಾಸಗಳು ಎಂದು ಹೇಳಿಕೊಂಡಿದ್ದ ನೋನೊಮುರಾ ಅದರ ವೆಚ್ಚ 30 ಸಾವಿರ ಡಾಲರ್‌ಗೆ ಬಿಲ್ಲೂ ನೀಡಿರಲಿಲ್ಲವಂತೆ. ಆದರೆ ಅತ್ತಿದ್ದೇಕೋ ಗೊತ್ತಾಗಿಲ್ಲ. ಈ ವಿಡಿಯೋ ಕ್ಲಿಪ್ ಈಗ ಆನ್‌ಲೈನ್‌ನಲ್ಲಿ ಹಿನ್ನೆಲೆ ಸಂಗೀತದೊಂದಿಗೆ ಹರಿದಾಡುತ್ತಿದೆ.